<u>ಈ ಲೇಖನದ ವಿಷಯಾನುಕ್ರಮಣಿಕೆ</u>


**ದೇವರ ಅಸ್ತಿತ್ವ 8/8** **2**

**ಅಶ್ವತ್ಥದ ಬೀಜ** **2**

**ಧಾತು** **10**

**ಉಳಿದ ಕಾರಣಗಳು** **17**




## ದೇವರ ಅಸ್ತಿತ್ವ 8/8

## ಅಶ್ವತ್ಥದ ಬೀಜ

**ವಿ.ಸೂ.** ಹಿಂದಿನ ಲೇಖನ ಓದದೇ ಈ ಲೇಖನವನ್ನು ಓದಬೇಡಿ. ಗೊಂದಲಗಳುಳಿಯುತ್ತವೆ.

ಅಶ್ವತ್ಥದ ಬೀಜದಿಂದ ಅಶ್ವತ್ಥವೃಕ್ಷ ಹುಟ್ಟುತ್ತದೆ. ಅಸಮರ್ಥವಾದ ಬೀಜ ಮರವಾಗುವದಿಲ್ಲ. ಮತ್ತು ಸಮರ್ಥವಾದ ಎಲ್ಲ ಬೀಜಗಳೂ ಮರವಾಗಿ ಬೆಳೆಯುವದಿಲ್ಲ. ಒಂದೇ ಮರದಿಂದ ಹುಟ್ಟಿಬಂದ ಬೀಜಗಳಲ್ಲೇ ಈ ವೈಷಮ್ಯಕ್ಕೆ ಕಾರಣವೇನು ? ಅಂದರೆ ಬೀಜಗಳ ಸಾಮರ್ಥ್ಯ ಅಸಾಮರ್ಥ್ಯಗಳಿಗೆ ಕಾರಣವೇನು ? ಮರದಲ್ಲಿ ಬೀಜ ನಿರ್ಮಾಣವಾಗುವಾಗ ಏನೊಂದು ಜೈವಿಕ, ರಾಸಾಯನಿಕ ಪ್ರಕ್ರಿಯೆ ನಡೆಯುತ್ತವೆ, ಅವು ಎಲ್ಲ ಬೀಜಗಳಿಗೂ ಸಮಾನವಾದದ್ದೇ. ಈ ಬೀಜಕ್ಕೆ ಸಾಮರ್ಥ್ಯ ನೀಡಬೇಕು ಇದಕ್ಕೆ ನೀಡಬಾರದು

ಎಂಬ ಪರಿಜ್ಞಾನ ಮರಕ್ಕಿರುವುದಿಲ್ಲ. ಉಳಿದ ಯಾವ ಭೌತಿಕ ಕಾರಣಗಳೂ ಇಲ್ಲ. ಒಲೆಯ ಮೇಲೆ ಪಾವಕ್ಕಿ ಹಾಕಿದ ಪಾತ್ರೆಯನ್ನಿಟ್ಟು ಅನ್ನ ಮಾಡಿದರೆ ಎಲ್ಲ ಅಕ್ಕಿಯ ಕಾಳುಗಳು ಒಂದೇ ರೀತಿಯಲ್ಲಿ ಅನ್ನವಾಗುತ್ತದೆ. ವ್ಯತ್ಯಾಸವಾಗುವುದಿಲ್ಲ. ಅಂದರೆ ಯಾವುದೇ ಒಂದು ಜಡ ಪದಾರ್ಥಕ್ಕೆ ತನ್ನಿಂದಾಗುವ ಕಾರ್ಯದಲ್ಲಿ ವೈಷಮ್ಯವನ್ನು ಉಂಟುಮಾಡಲು ಬರುವದಿಲ್ಲ. ಯಾವ ರೀತಿಯ ಕಾರ್ಯ ಉಂಟಾಗುವಂತೆ ಅದನ್ನು ನಿರ್ಮಿಸಿರುತ್ತಾರೆಯೋ ಅದೇ ರೀತಿಯಲ್ಲಿ ಅದು ಕಾರ್ಯ ನಿರ್ವಹಿಸುತ್ತವೆ. ಒಂದೇ ತರಹದ ಎರಡು ಕಾರ್ಯಗಳಲ್ಲಿ ವ್ಯತ್ಯಾಸ ಉಂಟಾಗಬೇಕಾದರೆ ಎರಡು ಕಾರಣಗಳು ಬೇಕು.

**1. ಆ ಎರಡು ಕಾರ್ಯಗಳ ಜನಕ ಕಾರಣಗಳು ಭಿನ್ನವಾಗಿರಬೇಕು.**

**2. ಜನಕ ಕಾರಣ ಒಂದೇ ಆಗಿದ್ದಲ್ಲಿ ನಿರ್ಮಾಣಪ್ರಕ್ರಿಯೆ ವಿಭಿನ್ನವಾಗಿರಬೇಕು.**

ಹುಲಿ ಮತ್ತು ಸಿಂಹ ಭಿನ್ನವಾಗಲು ಕಾರಣ ಅವುಗಳ ಜನಕಕಾರಣಗಳು ಭಿನ್ನವಾಗಿವೆ. ಅಂದರೆ ಜನಕ ಕಾರಣವಾದ ವಸ್ತು ಹುಲಿಯಾದ್ದರಿಂದ ಕಾರ್ಯ ಹುಲಿಯಾಯಿತು. ಜನಕ ಕಾರಣವಾದ ವಸ್ತು ಸಿಂಹವಾದ್ದರಿಂದ ಕಾರ್ಯ ಸಿಂಹವಾಯಿತು.

ಹಾಗಾದರೆ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಪರಸ್ಪರ ವಿಭಿನ್ನವಾಗಬಾರದು ಎಂಬ ಅಕ್ಷೇಪ ಸರಿಯಲ್ಲ. ಜನಕ ಕಾರಣ ಕೇವಲ ತಾಯಿಯೊಂದೇ ಅಲ್ಲ. ತಂದೆಯ ವೀರ್ಯವೂ ಹೌದು. ಅದೇ ಪ್ರಧಾನ ಕೂಡ. ತಾಯಿಯ ದೇಹ ಕಾರ್ಯ ನಿರ್ಮಾಣವಾಗುವ ಸ್ಥಳವಷ್ಟೇ . ಆ ವೀರ್ಯ ವಿಭಿನ್ನವಾದದ್ದರಿಂದ ಒಂದೇ ತಂದೆ ತಾಯಿಯ ಮಕ್ಕಳಲ್ಲಿ ವೈಚಿತ್ರ್ಯಕಂಡು ಬರುತ್ತದೆ.

ಬೀಜಗಳಿಗೆ ಕಾರಣವಾದ ಅಶ್ವತ್ಥ ವೃಕ್ಷ ಒಂದೇ ಆದ್ದರಿಂದ ಬೀಜಗಳ ವೈಷಮ್ಯಕ್ಕೆ ಇದು ಕಾರಣವಾಗಲು ಸಾಧ್ಯವಿಲ್ಲ.

ಇನ್ನು ಜನಕಕಾರಣ ಒಂದೇ ಆಗಿದ್ದು ನಿರ್ಮಾಣಪ್ರಕ್ರಿಯೆ ಭಿನ್ನವಾಗಿದ್ದರೆ ಕಾರ್ಯಗಳಲ್ಲಿ ವೈಲಕ್ಷಣ್ಯ ಕಂಡು ಬರುತ್ತದೆ.

ಮಡಕೆಯನ್ನು ನಿರ್ಮಾಣ ಮಾಡುವ ಯಂತ್ರ ಒಂದೇ. ಆ ಯಂತ್ರವನ್ನು ಒಂದೇ ರೀತಿಯಲ್ಲಿ ತಿರುಗಿಸಿದಾಗ ನಿರ್ಮಿಸುವ ಕುಂಬಾರ ಒಂದೇ ತರಹದ ಕೈಚಳಕವನ್ನು ತೋರಿದಾಗ ಒಂದೇ ರೂಪದ ಅನೇಕ ಮಡಿಕೆಗಳು ನಿರ್ಮಾಣವಾಗುತ್ತವೆ. ಯಂತ್ರವನ್ನು ವಿಭಿನ್ನಕ್ರಮದಲ್ಲಿ ತಿರುಗಿಸಿದಾಗ ಕುಂಬಾರ ಕೈಚಳಕವನ್ನು ಬದಲಿಸಿದಾಗ ವಿಭಿನ್ನ ಆಕಾರದ ಮಡಿಕೆಗಳು ನಿರ್ಮಾಣವಾಗುತ್ತವೆ.[1]

ಕಾರ್ಯವಾದ ಬೀಜಗಳಲ್ಲಿ ವೈಷಮ್ಯ ಉಂಟಾಗಿದೆ. ಜನಕ ಕಾರಣವಾದ ಪದಾರ್ಥ ಒಂದೇ. ಅಂದಮೇಲೆ ಈ ಬೀಜಗಳ ವೈಷಮ್ಯಕ್ಕೆ ನಿರ್ಮಾಣ

---

[1] ಇಷ್ಟು ಹಳೆಯ ದೃಷ್ಟಾಂತ ಈಗಿನವರಿಗೆ ಅವಶ್ಯಕತೆ ಇಲ್ಲ. ಯಂತ್ರಗಳ ಮಧ್ಯದಲ್ಲಿಯೇ ಬದು- ಕುತ್ತಿರುವ ಇಂದಿನ ಜನರಿಗೆ ಈ ವಿಷಯ ತುಂಬ ಸ್ಪಷ್ಟ. ಮೆಷೀನ್‌ಗಳ ವರ್ಕಿಂಗ್◌ಾರ್ಮುಲಾ ಬದಲಿಸಿದಾಗ ಮಾತ್ರ ಪ್ರಾಡಕ್ಟ್‌ನಲ್ಲಿ ಬದಲಾವಣೆಯುಂಟಾಗುತ್ತದೆ, ಇಲ್ಲದಿದ್ದರೆ ಪ್ರಾಡಕ್ಟ್‌ಗಳಲ್ಲಿ ಏಕರೂಪತೆ ಇರುತ್ತದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯ.

ಪ್ರಕ್ರಿಯೆಯ ವಿಭಿನ್ನತೆಯೇ ಕಾರಣ ಎಂದು ಅನಿವಾರ್ಯವಾಗಿ ಒಪ್ಪಬೇಕು.  ನಿರ್ಮಾಣ ಪ್ರಕ್ರಿಯೆ ಬೀಜದಿಂದ ಬೀಜಕ್ಕೆ ಬದಲಾಗಬೇಕಾದರೆ ಬದಲಾಯಿಸುವ ಒಂದು ‘ಚೇತನ’ ಇರಲೇ ಬೇಕು. ನಿರ್ಮಾಣ ಪ್ರಕ್ರಿಯೆಯೇ ಒಬ್ಬ ಚೇತನದ ಅಸ್ತಿತ್ವವನ್ನು ಸಮರ್ಥಿಸುತ್ತದೆ ಎನ್ನುವದನ್ನು ವೀರ್ಯದ ದೃಷ್ಟಾಂತದಿಂದ ತಿಳಿದೆವು. ಈಗ ಆ ನಿರ್ಮಾಣ ಪ್ರಕ್ರಿಯೆಯ ಬದಲಾವಣೆಗಳೂ ಚೇತನನ ಅಸ್ತಿತ್ವವನ್ನು ಸಮರ್ಥಿಸುತ್ತದೆ ಎಂದು ತಿಳಿಯುತ್ತಿದ್ದೇವೆ.

ಮುದ್ರಣ ಯಂತ್ರದಲ್ಲಿ ಯಾವ ರೀತಿಯಾದ ಪ್ರಕ್ರಿಯೆಯನ್ನು ಅಳವಡಿಸಲಾಗಿದೆಯೋ ಆ ಪ್ರಕ್ರಿಯೆಗೆ ಅನುಸಾರವಾಗಿ ಪುಟಗಳು ಮುದ್ರಣವಾಗುತ್ತವೆ. ಆ ಪ್ರಕ್ರಿಯೆ ತಂತಾನೇ ಬದಲಾಗುವುದಿಲ್ಲ, ಅದನ್ನು ಬದಲಾಯಿಸುವ ರೀತಿ ಗೊತ್ತಿದ್ದವನು ಬದಲಾಯಿಸಿದಾಗ ಮಾತ್ರ ವಿಭಿನ್ನ ರೀತಿಯ ಪುಟಗಳು ನಿರ್ಮಾಣವಾಗುತ್ತವೆ.

ಅಂದ ಮೇಲೆ ಚೇತನನಿಲ್ಲದೆ ಪ್ರಕ್ರಿಯೆಯ ಬದಲಾವಣೆಯಾಗಲು ಸಾಧ್ಯವೇ ಇಲ್ಲ.

ಪ್ರಕ್ರಿಯೆಯ ಬದಲಾವಣೆ ಆಗಿದೆ ಎಂದಮೇಲೆ ಚೇತನ ಇದ್ದೇ ಇದ್ದಾನೆ.

ಆ ಚೇತನ ನಾವಲ್ಲ. ನಮ್ಮಂತಹವರೂ ಅಲ್ಲ. ಮರದ ಒಳಗಿರುವ ಜೀವವೂ ಅಲ್ಲ. ಆ ಜೀವವೂ ಪ್ರಕ್ರಿಯೆಯ ಒಂದು ಅಂಗವಾಗಿದೆ. ಅಂದಮೇಲೆ ಸಮಗ್ರ ಜೀವ ಸಮುದಾಯದಿಂದ ಭಿನ್ನವಾದ ಒಂದು ಚೇತನ ಈ ಕಾರ್ಯವನ್ನು ನಿರ್ವಹಿಸುತ್ತಿದ್ದಾನೆ ಎಂದು ಒಪ್ಪಲೇಬೇಕು. ಅವನೇ ದೇವರು.

ವೇದಗಳಲ್ಲಿ ಈ ಮಾತು ತುಂಬ ಸುಂದರವಾಗಿ ಬಂದಿವೆ —

**“ಯೋ ನಃ ಪಿತಾ ಜನಿತಾ ಯೋ ವಿಧಾತಾ ಧಾಮಾನಿ ವೇದ ಭುವನಾನಿ ವಿಶ್ವಾ”**

**ಪಿತಾ —** ತಂದೆಯಲ್ಲಿ ನಿಂತು ವೀರ್ಯಪ್ರದನಾದವನು.

**ಜನಿತಾ —** ತಾಯಿಯಲ್ಲಿ ನಿಂತು ದೇಹ ನಿರ್ಮಾತೃವಾದವನು.

**ವಿಧಾತಾ —** ಪ್ರತಿಯೊಂದೂ ಪದಾರ್ಥಕ್ಕೆ ವಿಭಿನ್ನ ವಿಭಿನ್ನ ಪ್ರಕ್ರಿಯೆಯನ್ನು ಅಳವಡಿಸಿ ನಿರ್ಮಾಣ ಮಾಡುವವನು.

ಮೊಟ್ಟಮೊದಲಿಗೆ ಜಗತ್ತಿನ ಎಲ್ಲ ಪದಾರ್ಥಗಳೂ ಪರಸ್ಪರ ಭಿನ್ನ ಅಂದ ಮೇಲೆ ಅಷ್ಟು ತರಹದ ಜನಕಕಾರಣಗಳೇ ನಿರ್ಮಾಣವಾಗಿವೆ. ಇನ್ನೂ ಒಂದೇ ಜನಕ ಕಾರಣದಿಂದ ಹುಟ್ಟಿ ಬಂದ ಪದಾರ್ಥಗಳು ಪರಸ್ಪರ ವಿಭಿನ್ನ. ಅಂದರೆ ಅಷ್ಟು ತರಹದ ನಿರ್ಮಾಣ ಪ್ರಕ್ರಿಯೆಗಳಿವೆ. ಒಂದೇ ಪದಾರ್ಥದಲ್ಲಿ ಕೋಟಿಗಟ್ಟಲೆ ವೈಚಿತ್ರ್ಯಗಳಿವೆ. ಬಲಗೈ ಬೆರಳಿದ್ದ ಹಾಗೆ ಎಡಗೈ ಬೆರಳಿಲ್ಲ. ಒಂದೇ ಬೆರಳಲ್ಲೂ ಒಂದೇ ತರಹದ ರೇಖೆಗಳಿಲ್ಲ. ಒಂದೇ ರೇಖೆಯಲ್ಲಿಯೂ ಏಕತಾನತೆ ಇಲ್ಲ. ಆ ರೇಖೆಯು ಆರಂಭ ಒಂದು ರೀತಿ. ಮಧ್ಯ ಮತ್ತೊಂದು ತರಹ. ಅಂತ್ಯ ಇನ್ನೊಂದು ವಿಧ.

ಹಾಗೆಯೇ ಒಂದೇ ಗಿಡದ ಹೂಗಳಲ್ಲಿ ಒಂದು ಹೂವಿದ್ದ ಹಾಗೆ ಒಂದು ಹೂವಿಲ್ಲ, ಒಂದು ಹೂವಿನಲ್ಲೆ ಒಂದು ಎಸಳಿದ್ದ ಹಾಗೆ ಇನ್ನೊಂದು ಎಸಳಿಲ್ಲ. ಒಂದೇ ಎಸಳಿನಲ್ಲಿ ಎರಡು ಮೂರು

ಬಣ್ಣಗಳು. ಎರಡು ಮೂರು ಗಾತ್ರಗಳು. ಮೊನಚಿದ್ದ ಹಾಗೆ ಮೂಲವಿಲ್ಲ. ಮೂಲವಿದ್ದ ಹಾಗೆ ಮಧ್ಯವಿಲ್ಲ. ಒಂದು ರೇಖೆಯಿಂದ, ಒಂದು ಎಸಳಿನಿಂದ ಆರಂಭಿಸಿ ಅನಂತಾನಂತ ಪದಾರ್ಥಗಳಲ್ಲಿ ವೈಚಿತ್ರ್ಯವಿದೆ. ಇದನ್ನೆಲ್ಲ ನಿರ್ಮಾಣ ಮಾಡುತ್ತಿರುವ ಆ ಚೇತನನ ಜ್ಞಾನ, ಶಕ್ತಿ, ಸಾಮರ್ಥ್ಯಗಳಿಗೆ ಎಣೆಯರಲು ಸಾಧ್ಯವೇ ಇಲ್ಲ ಎಂದು ಶ್ರೀಮದಾಚಾರ್ಯರು ತುಂಬ ಆದರದಿಂದ ಆ ಚೇತನೋತ್ತಮನನ್ನು ಹಾಡಿ ಹೊಗಳಿದ್ದಾರೆ —

**ಬಹುಚಿತ್ರಜಗದ್ ಬಹುಧಾಕರಣಾತ್**
**ಪರಶಕ್ತಿರನಂತಗುಣಃ ಪರಮಃ**

“ಅನಂತ ವೈಚಿತ್ರ್ಯಗಳನ್ನಿಟ್ಟು ಈ ಜಗತ್ತನ್ನು ಅನಂತ ವಿಧವನ್ನಾಗಿ ಮಾಡಿರುವ ಆ ಪರಮಚೇತನ ಅಪಾರಶಕ್ತಿಸ್ವರೂಪನೇ ಸರಿ.
ಅನಂತಗುಣಪೂರ್ಣನೇ ಸರಿ”

ಈ ಪ್ರಸಂಗದಲ್ಲಿ ಶ್ರೀಮದಾಚಾರ್ಯರು ಅಶ್ವತ್ಥದ ಬೀಜವನ್ನು ಬಿಟ್ಟು ಯಾವುದೇ ಬೀಜವನ್ನು ಉಲ್ಲೇಖ

ಮಾಡಿದ್ದರೂ ಸಮಸ್ಯೆಯಿರುತ್ತಿರಲಿಲ್ಲ. ಆದರೆ ಉಳಿದೆಲ್ಲವನ್ನು ಬಿಟ್ಟು ವಟಬೀಜವನ್ನೇ ಉಲ್ಲೇಖ ಮಾಡಲು ತುಂಬ ಮಹತ್ತ್ವದ ಕಾರಣಗಳಿವೆ. ಬ್ರಹ್ಮಸೂತ್ರಭಾಷ್ಯದ ಅನುವಾದ ಉಪನ್ಯಾಸಗಳ ಸಂದರ್ಭದಲ್ಲಿ ಅದನ್ನು ವಿವರಿಸುತ್ತೇನೆ.

## ಧಾತು

ಧಾತು ಎನ್ನುವ ಶಬ್ದವನ್ನು ಆಚಾರ್ಯರು ವಾತ ಪಿತ್ತ ಕಫ ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದಾರೆ.

ಗೆಡ್ಡೆ ಗೆಣಸಿನಂತಹ ಪದಾರ್ಥಗಳು ಮನುಷ್ಯನಲ್ಲಿ ವಾತದ ಪರಿಣಾಮವನ್ನು ಉಂಟು ಮಾಡುತ್ತವೆ, ಹಾಗೆಯೇ ಹುಳಿಪದಾರ್ಥಗಳು ಪಿತ್ತವನ್ನೂ, ತಂಪಗಿನ ಪದಾರ್ಥಗಳು ಕಫವನ್ನೂ ಉಂಟು ಮಾಡುತ್ತವೆ. ಈ ವಿಷಯವನ್ನು ಆಧಾರವಾಗಿಟ್ಟುಕೊಂಡು ಆಚಾರ್ಯರು ದೇವರ ಅಸ್ತಿತ್ವವನ್ನು ಸಮರ್ಥಿಸಿದ್ದಾರೆ.

ವಾತ ಮುಂತಾದವುಗಳಿಗೆ ಕಾರಣವೇನು ಎಂದು ಕೇಳಿದರೆ ತುಂಬ ಸುಲಭವಾಗಿ ನಾವು ಗೆಡ್ಡೆ ಗೆಣಸನ್ನು ತಿಂದದ್ದು ಎಂದು ಹೇಳಿ ಬಿಡುತ್ತೇವೆ.

ಆದರೆ ಗೆಡ್ಡೆ ಗೆಣಸುಗಳು ವಾತಾದಿಗಳ ಪರಿಣಾಮಕ್ಕೆ ಪ್ರಧಾನ ಕಾರಣಗಳಲ್ಲ ಎಂದು ಆಚಾರ್ಯರು ಹೇಳುತ್ತಾರೆ.

ಗೆಡ್ಡೆ ಗೆಣಸುಗಳಷ್ಟೇ ವಾತಕ್ಕೆ ಕಾರಣವಾಗಿದ್ದರೆ ತಿಂದ ಎಲ್ಲರಿಗೂ ವಾತ ಉಂಟಾಗಬೇಕಾಗಿತ್ತು.

ತೀಕ್ಷ್ಣವಾದ ವಿಷ ಸಾವಿಗೆ ಪ್ರಧಾನ ಕಾರಣ. ಆದ್ದರಿಂದಲೇ ಅದನ್ನು ಸೇವಿಸಿದ ಎಲ್ಲರಿಗೂ ಸಾವುಂಟಾಗುತ್ತದೆ.

ಆದರೆ ಹತ್ತು ಗೆಣಸುಗಳನ್ನು ಹೆಚ್ಚಿ ಅವುಗಳಿಂದ ಒಂದು ಪದಾರ್ಥವನ್ನು ಸಿದ್ಧಪಡಿಸಿ ನಾಕು ಜನರಿಗೆ ಬಡಿಸಿದಾಗ ಅದನ್ನು ತಿಂದ ಮೂರು ಜನರಿಗೆ ವಾತದ ಪರಿಣಾಮವಾಗಲಿಲ್ಲ. ಒಬ್ಬನಿಗೆ ಪರಿಣಾಮವಾಯಿತು. ಅಂದ ಮೇಲೆ ಗೆಣಸು ಮಾತ್ರವೇ ವಾತಕ್ಕೆ ಕಾರಣವಲ್ಲ ಎಂದು ಒಪ್ಪಬೇಕು.

ಆದರೆ ಗೆಣಸು ವಾತಕ್ಕೆ ಕಾರಣ ಎನ್ನುವದು ನಿರ್ವಿವಾದ. ಅದನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಆದ್ದರಿಂದ ಆ ಮೂರು ಜನರ ದೇಹಕ್ಕೆ ವಾತದಿಂದ

ಪರಿಣಾಮವಾಗದ ಸಾಮರ್ಥ್ಯವಿದೆ. ಇವನ ದೇಹಕ್ಕೆ ಇಲ್ಲ ಎಂದು ಒಪ್ಪಬೇಕು. ಆದರೆ ಇದನ್ನು ವೈದ್ಯಶಾಸ್ತ್ರ ಪುರಸ್ಕರಿಸುವದಿಲ್ಲ. ಎಲ್ಲ ದೇಹದ ವಿನ್ಯಾಸಗಳಲ್ಲಿ ಈ ವಿಷಯದಲ್ಲಿ ಸಾಮ್ಯತೆ ಇದೆ ಎಂದು ವೈದ್ಯಕೀಯ ಪ್ರತಿಪಾದಿಸುತ್ತದೆ. ಅಂದರೆ ವಾತ ಪಿತ್ತ ಕಫಗಳ ಪರಿಣಾಮವಾಗದ ದೇಹವೇ ಇಲ್ಲ ಎಂದಾಯಿತು. ಹಾಗಾದರೆ ವಾತ ಪಿತ್ತಗಳ ಪರಿಣಾಮಕ್ಕೆ ಕಾರಣವೇನು ಎಂದರೆ ವೈದ್ಯಶಾಸ್ತ್ರ ನೀಡಿರುವ ಉತ್ತರವಿಷ್ಟು —

ಗೆಣಸು ವಾತಕ್ಕೆ ಕಾರಣ, ಅದರಲ್ಲಿ ವಾತದ ಪರಿಣಾಮ ಉಂಟುಮಾಡುವದೊಂದು ಶಕ್ತಿ ಇದೆ. ಆ ಶಕ್ತಿ ಹೊಟ್ಟೆಯನ್ನು ಸೇರಿದ ಮೇಲೆ ಅಭಿವ್ಯಕ್ತವಾದರೆ ಅದು ವಾತವನ್ನು ಉಂಟುಮಾಡುತ್ತದೆ. ಆ ಶಕ್ತಿಯ ಅಭಿವ್ಯಕ್ತಿ ಅನಭಿವ್ಯಕ್ತಿಗಳು ಪಚನವಾಗುವ ಪ್ರಕ್ರಿಯೆಯ ಮೇಲೆ ಆಧರಿತವಾಗಿರುತ್ತದೆ.

ಹೇಗೆ ಕಡಲೆ ಕಾಳಿನಲ್ಲಿರುವ ಎಣ್ಣೆಯನ್ನು ತೆಗೆಯಲು ಒಂದು ವಿಶಿಷ್ಟವಾದ ಪ್ರಕ್ರಿಯೆ ಅವಶ್ಯಕತೆಯಿದೆಯೋ, ಹಾಗೆಯೇ ಗೆಣಸಿನಲ್ಲಿರುವ ವಾತದ ಪರಿಣಾಮವನ್ನುಂಟು

ಮಾಡುವ ಶಕ್ತಿಯನ್ನು ಅಭಿವ್ಯಕ್ತಿಗೊಳಿಸುವ ಪ್ರಕ್ರಿಯೆ ನಮ್ಮ ದೇಹದಲ್ಲಿ ಜರುಗಿದಾಗ ಮಾತ್ರ ವಾತದ ಪರಿಣಾಮ ಉಂಟಾಗುತ್ತದೆ.

ಪ್ರಕ್ರಿಯೆ ಮತ್ತು ಅದರ ಬದಲಾವಣೆ ಚೇತನನಿಂದ ಮಾತ್ರ ಉಂಟಾಗಲು ಸಾಧ್ಯ ಎಂದು ಹಿಂದಿನ ಪ್ರಕರಣದಲ್ಲಿ ಸ್ಪಷ್ಟವಾಗಿ ತಿಳಿದುಕೊಂಡಿದ್ದೇವೆ.

ನಮ್ಮ ಜಠರ ಒಂದು ಜಡವಾದ ಯಂತ್ರವಷ್ಟೇ. ಯಾವ ಯಂತ್ರಕ್ಕೂ ತನ್ನಲ್ಲಿ ತಾನೇ ಪ್ರಕ್ರಿಯೆಯ ಬದಲಾವಣೆಯನ್ನು ಮಾಡಿಕೊಳ್ಳಲು ಬರುವದಿಲ್ಲ.

ಗೆಣಸು ನಾಕು ಜನರ ಜಠರಗಳನ್ನು ಸೇರಿದಾಗ ಎಲ್ಲ ಜಠರಗಳ ಪಚನ ಪ್ರಕ್ರಿಯೆ ಒಂದೇ ಆಗಿರುವಾಗ ಎಲ್ಲರಲ್ಲೂ ಒಂದೇ ತರಹದ ಪರಿಣಾಮ ಉಂಟಾಗಬೇಕಿತ್ತು. ಹಾಗಾಗುವದಿಲ್ಲ, ಅಂದರೆ ಒಬ್ಬನ ಜಠರ ಮಾತ್ರ ಗೆಣಸಿನಲ್ಲಿರುವ ವಾತದ ಶಕ್ತಿಯನ್ನು ಉದ್ಬೋಧಗೊಳಿಸಿದೆ.

ಅಂದಮೇಲೆ ಜಠರದ ಸಹಜ ಪ್ರಕ್ರಿಯೆಗೆ ಬದಲಾಗಿ ಗೆಣಸಿನಲ್ಲಿರುವ ವಾತದ ಶಕ್ತಿಯನ್ನು ಉದ್ಬೋಧನಗೊಳಿಸುವ ಪ್ರಕ್ರಿಯೆ ಉಂಟಾಗಿವೆ. ಈ

ಪ್ರಕ್ರಿಯೆಯ ಬದಲಾವಣೆಗೆ ಕಾರಣ ಯಾರು ? ನಾವೇ ಕಾರಣರೇ ? ಖಂಡಿತ ಅಲ್ಲ. ನಮಗೆ ಆ ಪ್ರಕ್ರಿಯೆಯನ್ನು ಬದಲಾಯಿಸುವ ಶಕ್ತಿ ಗೊತ್ತಿದ್ದರೆ ನಾವೇಕೆ ವಾತದ ಪರಿಣಾಮವನ್ನು ಉಂಟುಮಾಡಿಕೊಂಡು ಒದ್ದಾಡುತ್ತಿದ್ದೆವು?

ಹೊರಗಿನ ಮತ್ತೊಬ್ಬ ಜೀವನೇ ? ಸಾಧ್ಯವಿಲ್ಲ. ತನ್ನ ಹೊಟ್ಟೆಯಲ್ಲಿರುವದನ್ನೇ ಪಚನಗೊಳ್ಳಿಸಿಕೊಳ್ಳಲು ಬಾರದವನಿಗೆ ಮತ್ತೊಬ್ಬನ ಹೊಟ್ಟೆಯಲ್ಲಿ ಪ್ರಕ್ರಿಯೆಯನ್ನು ನಡೆಸಲಿಕ್ಕಾಗುತ್ತದೆಯೇ?

ಆದ್ದರಿಂದ ನಾವಿಷ್ಟು ನಿರ್ಣಯಕ್ಕೆ ಬರಬಹುದು. ಪ್ರಕ್ರಿಯೆಯಲ್ಲಿ ಬದಲಾವಣೆ ಉಂಟಾಗಿದೆ. ಅಂದಮೇಲೆ ಅದು ಕೇವಲ ಜಡ ಯಂತ್ರದ ಕೆಲಸವಲ್ಲ. ಚೇತನನಿರಬೇಕು. ಆ ಚೇತನ ನಾವಲ್ಲ. ಮತ್ತೊಬ್ಬನೂ ಅಲ್ಲ. ಎಲ್ಲರಲ್ಲೂ ಈ ತರಹದ ಪ್ರಕ್ರಿಯೆಯ ಬದಲಾವಣೆಯನ್ನು ಉಂಟುಮಾಡಿ ಅದರ ಮುಖಾಂತರ ತನ್ನ ಅಸ್ತಿತ್ವವನ್ನು ಜಗತ್ತಿಗೆ ತಿಳಿಯ ಪಡಿಸುತ್ತಿರುವ ಒಬ್ಬ ಚೇತನ ಇದ್ದಾನೆ, ಅವನೇ ದೇವರು.

ನಮ್ಮ ಚಿಂತನೆಗೆ ಭಗವದ್ಗೀತೆಯ ಬೆಂಬಲವೂ ದೊರಕುತ್ತದೆ. ಗೀತೆಯಲ್ಲಿ ಭಗವಂತನೇ ಹೇಳಿದ ಮಾತಿದು —

**ಅಹಂ ವೈಶ್ವಾನರೋ ಭೂತ್ವಾ**
**ಪ್ರಾಣಿನಾಂ ದೇಹಮಾಶ್ರಿತಃ**
**ಪ್ರಾಣಾಪಾನಸಮಾಯುಕ್ತಃ**
**ಪಚಾಮ್ಯನ್ನಂ ಚತುರ್ವಿಧಮ್ ॥**

“ಎಲ್ಲ ಜೀವರಾಶಿಗಳ ದೇಹದಲ್ಲಿ ನಾನು ವೈಶ್ವಾನರ ಎಂಬ ರೂಪದಿಂದ ಇದ್ದು ಪ್ರಾಣ ಅಪಾನ ಎಂಬ ದೇವತೆಗಳೊಡಗೂಡಿ ಅವರು ತಿನ್ನುವ, ಕುಡಿಯುವ ಪದಾರ್ಥಗಳನ್ನು ಪಚನಗೊಳಿಸುತ್ತೇನೆ”

ಇಲ್ಲೊಂದು ಪ್ರಾಸಂಗಿಕವಾದ ಪ್ರಶ್ನೆಗೆ ಉತ್ತರ ನೀಡಬೇಕು. ಪ್ರಶ್ನೆ ಹೀಗಿದೆ — ದೇವರನ್ನು ಕರುಣಾಳು ಎಂದು ಹೇಳುತ್ತೀರಿ ಮತ್ತು ಜೀವರಲ್ಲಿ ನಿಂತು ಈ ಎಲ್ಲಾ ಪ್ರಕ್ರಿಯೆಗಳನ್ನು ಮಾಡುತ್ತಾನೆ ಎಂದು ಹೇಳುತ್ತೀರಿ. ಕರುಣಾಳುವಾಗಿದ್ದಲ್ಲಿ ಅವನೇಕೆ ಜೀವರಿಗೆ ಈ ವಾತ ಪಿತ್ತಗಳ

ಪರಿಣಾಮವನ್ನುಂಟು ಮಾಡುತ್ತಾನೆ ? ಗರ್ಭರಕ್ಷಣೆಯನ್ನು ಮಾಡುವ ಅವನೇ ಗರ್ಭಪಾತವನ್ನೇಕೆ ಮಾಡಿಸುತ್ತಾನೆ ?

ಒಂದು ವಿಷಯವನ್ನು ಎಲ್ಲರೂ ಸ್ಪಷ್ಟವಾಗಿ ತಿಳಿಯಬೇಕು. ದೇವರು ಕೇವಲ ಸುಖವನ್ನು ಮಾತ್ರ ನೀಡುವದಿಲ್ಲ. ಅಪಾರ ದುಃಖವನ್ನೂ ಸಹ ನೀಡುತ್ತಾನೆ. ಈ ವಿಷಯವನ್ನು ನಿರ್ಭಯವಾಗಿ ಯಾವ ದಾಕ್ಷಿಣ್ಯವಿಲ್ಲದೆ ಮೊಟ್ಟ ಮೊದಲಿಗೆ ಸಾರಿ ಹೇಳಿದವರು ಶ್ರೀಮದಾಚಾರ್ಯರು. ಅವರ ಸೂತ್ರಭಾಷ್ಯದಲ್ಲಿ ಮತ್ತು ಉಳಿದ ಅನೇಕ ಗ್ರಂಥಗಳಲ್ಲಿ ಈ ಮಾತು ಬಂದಿದೆ —

**“ಸುಖಸ್ಯ ದುಃಖಸ್ಯ ಚ ರಾಜಸಿಂಹ**
**ನಾನ್ಯಃ ಕರ್ತಾ ವಾಸುದೇವಾದಿತಿ ಸ್ಮ ”**

ಭಗವಂತ ಸಂಸಾರದಲ್ಲಿ ನಮ್ಮ ಕಾರ್ಯಗಳ ಅನುಸಾರವಾಗಿ ಲನೀಡುತ್ತಾನೆ. ಅದಕ್ಕೆ ಅವನನ್ನು “ಕರ್ಮಾನುಬಂಧಿ” ಎಂದು ಶಾಸ್ತ್ರ ಕರೆಯುತ್ತದೆ. ಈ ಜನ್ಮದ ಸುಖ ದುಃಖಗಳು ಪ್ರಾಚೀನ ಕರ್ಮದ ಪರಿಣಾಮ ಎಂದು ಹಿಂದೆ ತಿಳಿದುಕೊಂಡೆವು.

ವಾತದಿಂದ ಉಂಟಾಗುವ ನೋವನ್ನು ಅನುಭವಿಸುವ ಕರ್ಮವನ್ನು ಯಾರು ಮಾಡಿದ್ದಾರೆಯೋ ಅವರಲ್ಲಿ ಭಗವಂತ ನಿಂತು ಜಠರದಲ್ಲಿ ಆ ಪ್ರಕ್ರಿಯೆಯನ್ನು ಉದ್ಬೋಧಗೊಳಿಸಿ ದುಃಖ ನೀಡುತ್ತಾನೆ. ಹಿಂದಿನ ಜನ್ಮದಲ್ಲಿ ತನ್ನ ಅನ್ನವನ್ನು ಹತ್ತು ಜನರೊಡನೆ ಹಂಚಿ ತಿಂದ ಉದಾರಿ ಮನುಷ್ಯನಿಗೆ ಈ ಜನ್ಮದಲ್ಲಿ ಏನನ್ನು ತಿಂದರೂ ಅರಗಿಸಿಕೊಳ್ಳುವ ಶಕ್ತಿಯನ್ನು ನೀಡಿ ಸುಖವಾಗಿರುವ ಹಾಗೆ ಭಗವಂತ ಅನುಗ್ರಹಿಸುತ್ತಾನೆ. ಆದ್ದರಿಂದ ನಾವು ಮಾಡಿದ ಕರ್ಮಗಳ ಅನುಸಾರವಾಗಿ ಭಗವಂತ ನಮ್ಮ ದೇಹವನ್ನು ವಿನ್ಯಾಸಗೊಳಿಸುತ್ತಾನೆ. ಪ್ರಕ್ರಿಯೆಗಳನ್ನು ಅಳವಡಿಸಿರುತ್ತಾನೆ.

## ಉಳಿದ ಕಾರಣಗಳು

ದೇವರಿದ್ದಾನೆ ಎಂದು ಒಪ್ಪಲು ಒಂದು ಕಾರಣ ದೊರಕಿದರೂ ಸಾಕು. ಮೂರ್ಖರಿಗೆ ನೂರು ಕಾರಣ ನೀಡಿದರೂ ಉಪಯೋಗವಿಲ್ಲ . ಬುದ್ಧಿವಂತ ಮನುಷ್ಯನಿಗೆ ಇಷ್ಟು ಕಾರಣಗಳು ಸಾಕು ಎಂದು ನನಗನಿಸುತ್ತದೆ.

ಮತ್ತೂ, ಆಚಾರ್ಯರು ನೀಡಿರುವ ಮುಂದಿನ ಕಾರಣಗಳು ಪಕ್ವ ಮನಸ್ಸಿಗೆ ಮಾತ್ರ ಅರ್ಥವಾಗುವಂಥವು. ಹಾಗೂ ಭೌತಿಕ ಜಗತ್ತಿನ ತುಂಬ ದೊಡ್ಡ ದೊಡ್ಡ ಸಮಸ್ಯೆಗಳಿಗೆ ಉತ್ತರವನ್ನು ನೀಡಿದಂಥವು. ಅಯಸ್ಕಾಂತದ ದೃಷ್ಟಾಂತ ಇವತ್ತಿನ ಭೌತವಿಜ್ಞಾನಿಗಳ ಗುರುತ್ವಾಕರ್ಷಣ ಸಿದ್ಧಾಂತದಲ್ಲಿ ಸಾಕಷ್ಟು ತಿದ್ದುಪಡಿಗಳನ್ನು ಮಾಡಿ ಒಂದು ಅಪೂರ್ವವಾದ ಸಿದ್ಧಾಂತವನ್ನು ಮುಂದಿಡುತ್ತದೆ. ಎಂಥ ವಿಜ್ಞಾನಿಯೂ ಮೂಗಿನ ಮೇಲೆ ಬೆರಳಿಟ್ಟು ಆಶ್ಚರ್ಯ ಪಡುವಂಥ ಆಚಾರ್ಯರ ಭೌತಶಾಸ್ತ್ರದ ಸೂತ್ರ ಈ ಪುಸ್ತಕದ ಮೂಲೆಯಲ್ಲಿ ಉಳಿಯಬಾರದು . ಆದಕ್ಕಾಗಿಯೇ ಒಂದು ಪ್ರತ್ಯೇಕ ಹೊತ್ತಿಗೆಯನ್ನು ಸಿದ್ಧಪಡಿಸಲಿದ್ದೇನೆ. ಭೌತಶಾಸ್ತ್ರದಲ್ಲಿ ತತ್ವವಾದಿಗಳಿಗಿರುವ ಜ್ಞಾನ ಅತ್ಯಂತ ಪರಿಶುದ್ಧ ಮತ್ತು ಉನ್ನತಸ್ತರದ್ದು ಎಂದು ಆ ಪುಸ್ತಕ ಸಾಬೀತು ಪಡಿಸಲಿದೆ.

ಹಾಗೆಯೇ ‘‘ದೇವತಾಭ್ಯುಪಯಾಚನಮ್’’ ಎನ್ನುವದು ಅನುಭವದ ಪಕ್ವತೆ ಇಲ್ಲದವರಿಗೆ

ಅರ್ಥವೇ ಆಗದ ಮಾತು. “ಮೃತೇ ಕರ್ಮನಿವೃತ್ತಿಶ್ಚ” ಎನ್ನುವದು ಆಳವಾದ ಶಾಸ್ತ್ರಜ್ಞಾನವಿಲ್ಲದಿದ್ದರೆ ಬುದ್ಧಿಗೆಟಕುವದಿಲ್ಲ.

“ಅಂಬುಭಕ್ಷಣಮ್” ಎನ್ನುವದು ತುಂಬ ಸುಲಭವಾಗಿ ಅರ್ಥವಾಗುವ, ಹಾಗೆಯೇ ದೇವರ ಅಸ್ತಿತ್ವವನ್ನು ಚನ್ನಾಗಿ ಮನದಟ್ಟು ಮಾಡಿಸುವಂಥ ಕಾರಣ. ಅದರ ನಿರೂಪಣೆಗಾಗಿ ಒಂದು ಪ್ರತ್ಯೇಕ ಸಂದರ್ಭವನ್ನು ಆರಿಸಿಟ್ಟುಕೊಂಡಿದ್ದೇನೆ.

ಅದಕ್ಕಾಗಿ ಆ ಕಾರಣಗಳನ್ನು ಯುಕ್ತವಾದ ಕಾಲದಲ್ಲಿ, ಅಂದರೆ ವಿಶ್ವನಂದಿನಿಯ ಓದುಗ ವರ್ಗ ಒಂದು ಪಕ್ವತೆಯ ಶಿಖರವನ್ನು ಏರಿದಾಗ ಅವುಗಳನ್ನು ವಿವರಿಸುತ್ತೇನೆ. ಯಾವ ಸಂದರ್ಭದಲ್ಲಿ ಹೇಳಿದಾಗ ಹೇಳಿದ ವಿಷಯ ಬೇರೂರಲು ಸಾಧ್ಯ, ನಾಸ್ತಿಕತೆ, ಸಂಶಯಗಳು ನಿರ್ಮೂಲವಾಗಲು ಸಾಧ್ಯ, ಆಗ ಹೇಳಿದರೇ ಚೆನ್ನ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491